ಅಧ್ಯಾಯ-೧೨
ಪ್ರೇಕ್ಷಣೀಯ ಸ್ಥಳಗಳು

ಹುಣಸೂರು ತಾಲೂಕಿನ ಸಾಂಸ್ಕೃತಿಕ ಪರಂಪರೆ ವೈವಿಧ್ಯತೆಯಿಂದ ಕೂಡಿದೆ. ಭೌಗೋಳಿಕವಾಗಿ ಅರೆಮಲೆನಾಡು ಹಾಗೂ ಬಯಲು ಸೀಮೆಗಳಲ್ಲಿದ್ದು ಇಲ್ಲಿರುವ ಶ್ರೀ ಓಂಕಾರೇಶ್ವರ ಬೆಟ್ಟ, ಕಳ್ಳಬೆಟ್ಟ, ನವಿಲುಮಂಟಿಗಳು ನಿಸರ್ಗ ಪ್ರೇಮಿಗಳಿಗೆ, ಚಾರಣಾಸಕ್ತರಿಗೆ ಮುದನೀಡುತ್ತವೆ. ಗಂಡುಹೊಳೆ, ಹೊನ್ನುಹೊಳೆ ಎಂದೆಲ್ಲಾ ಕರೆಸಿಕೊಂಡಿರುವ ಲಕ್ಷ್ಮಣತೀರ್ಥ ನದಿಯು ಕಾವೇರಿಯನ್ನು ಕೂಡುವ ಸಂಗಮಸ್ಥಾನದವರೆಗಿನ ಬಯಲನ್ನು ಹಸಿರಾಗಿಸಿದೆ. ಹಾರಂಗಿ ಅಣೆಕಟ್ಟೆಯು ತಾಲೂಕನ್ನು ಸುಮಾರು ಅರ್ಧಭಾಗದಷ್ಟು ಹಸಿರು ನಾಡನ್ನಾಗಿಸಿದೆ.

ತಾಲೂಕಿನ ಪ್ರಾಚೀನ ಶಾಸನಗಳಲ್ಲಿ ಹಿಂದಿನ ಹಲವಾರು ಆಡಳಿತ ವಿಭಾಗಗಳು ಉಲ್ಲೇಖಗೊಂಡಿವೆ. ಇತಿಹಾಸಕಾಲದ ಆರಂಭ ಹಂತದಲ್ಲೇ ಹುಣಸೂರು ಪ್ರದೇಶ ಪುನ್ನಾಡಿನ ವ್ಯಾಪ್ತಿಯಲ್ಲಿತ್ತು. ಗಂಗ ಶಿವಮಾರನ ಶಾಸನವೊಂದರಿಂದ ಪುನ್ನಾಟರಾಜ್ಯ ಮೊದಲು ೬೦೦೦ ಗ್ರಾಮಗಳನ್ನೊಳಗೊಂಡ ವಿಷಯವಾಗಿತ್ತೆಂದು ಗೊತ್ತಾಗುತ್ತಿದ್ದು, ಮುಂದೆ ಅದು ಪುನ್ನಾಟ-೧೦,೦೦೦ ರಾಜ್ಯವಾಗಿದ್ದುದಾಗಿ ಹಲವು ಶಾಸನಗಳಿಂದ ವೇದ್ಯವಾಗುತ್ತದೆ.

ಗಂಗರ ಕಾಲದಲ್ಲಿ ಈ ಪ್ರದೇಶ ಗಂಗವಾಡಿ-೯೬೦೦೦ ಪ್ರಾಂತಕ್ಕೂ ಚೋಳರ ಆಡಳಿತಾವಧಿಯಲ್ಲಿ ಮುಡಿಗೊಂಡ ಚೋಳಮಂಡಲದ ದಡಿಗಪಾಡಿ ಪ್ರಾಂತಕ್ಕೂ ಸೇರಿತ್ತು. ಹೊಯ್ಸಳರ ಆಳ್ವಿಕೆಯಲ್ಲಿ ಹೊಯ್ಸಣನಾಡೆಂದೇ ಇದು ಖ್ಯಾತವಾಗಿದ್ದ ಅಂಶವನ್ನು ಅವರ ಕಾಲದ ಶಾಸನಗಳು ವ್ಯಕ್ತಪಡಿಸುತ್ತವೆ. ವಿಜಯನಗರ ಮತ್ತು ನಂತರದ ಅರಸರ ಕಾಲದಲ್ಲಿ ಈ ಪ್ರದೇಶದ ವಿವಿಧ ಭಾಗಗಳನ್ನು ಹೊಯ್ಸಣನಾಡು, ಬಡಗರೆನಾಡು ಎಂದೂ ಕರೆಯಲಾಗುತ್ತಿದ್ದು ತಾಲೂಕಿನ ಮಲ್ಲಾಡಿ (ಕಟ್ಟೆಮಳಲವಾಡಿ) ಮುಂತಾದವು ಸೀಮೆಗಳಾಗಿದ್ದ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಸಾಂಸ್ಕೃತಿಕ ಕ್ಷೇತ್ರಕ್ಕೆ ಭದ್ರ ಬುನಾದಿ ಹಾಕಿದ ತಲಕಾಡಿನ ಗಂಗರ ಕಾಲದ ಶಾಸನಗಳೂ, ಸ್ಮಾರಕಗಳೂ ತಾಲೂಕಿನಲ್ಲಿ ದೊರಕಿವೆ. ಚೋಳರ ಕಾಲದ ದೇವಾಲಯಗಳು ಕೊಳವಿಗೆ, ಕಿರಿಸೊಡ್ಲು ಮುಂತಾದೆಡೆಗಳಲ್ಲಿವೆ. ಹೊಯ್ಸಳರ ಕಾಲದ ಸುಂದರ ವಾಸ್ತುಶಿಲ್ಪಗಳು ಧರ್ಮಪುರ,

ಮರದೂರು, ತರೀಕಲ್ಲು ಮುಂತಾದೆಡೆಯಲ್ಲಿವೆ. ಹಾಗೆಯೇ ಜೈನ ಬಸದಿಗಳು ತಾಲೂಕಿನ ಯಮಗುಂಬ, ಕಲ್ಲಹಳ್ಳಿ, ಧರ್ಮಾಪುರ, ಕಿರಿಜಾಜಿ ಮುಂತಾದೆಡೆಗಳಲ್ಲಿದ್ದು, ಗೊಮ್ಮಟಗಿರಿಯಲ್ಲಿರುವ ಏಕಶಿಲೆಯ ಬಾಹುಬಲಿ ವಿಗ್ರಹ ಉತ್ಕೃಷ್ಟ ಕಲಾಕೃತಿಯಾಗಿದೆ. ಪ್ರಾಚೀನ ಶೌರ್ಯ ಪರಂಪರೆಯನ್ನು ಮಾರ್ದನಿಸುವ ವೀರಗಲ್ಲು – ಮಾಸ್ತಿಕಲ್ಲುಗಳು ತಾಲೂಕಿನ ರತ್ನಪುರಿ ಮುಂತಾದೆಡೆಗಳಲ್ಲಿವೆ. ಪ್ರಕೃತಿ ಪ್ರೇಮಿಗಳಿಗೆ ತಾಲೂಕಿನ ಗಡಿಯಂಚಲ್ಲಿರುವ ನಾಗರಹೊಳೆ ಅಭಯಾರಣ್ಯ (ದಿ. ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ), ಕಚ್ಚೆನಹಳ್ಳಿ ಕಾಡು ಹಾಗೂ ಹೈರಿಗೆಕೆರೆಗೆ ಕಟ್ಟಿರುವ ಅಣೆಕಟ್ಟು ಪ್ರಿಯವಾದವು. ಅಲ್ಲದೆ, ತಾಲೂಕಿನ ಕಟ್ಟೆಮಳಲವಾಡಿ, ಹರವೆ, ಹೊಸಕೋಟೆ, ಹಳೇಬೀಡು, ಯಮಗುಂಬ, ಚಿಲ್ಕುಂದ, ಧರ್ಮಪುರ, ರತ್ನಪುರಿ, ತಿಪ್ಲೂರು ಮುಂತಾದ ೭೮ಕ್ಕೂ ಹೆಚ್ಚು ಗ್ರಾಮಗಳಲ್ಲಿರುವ ೧೨೧ ದೇವಾಲಯಗಳನ್ನು ಮುಜರಾಯಿ ಇಲಾಖೆಯು 'ಸಿ' ವರ್ಗಕ್ಕೆ ಸೇರಿದ ಧಾರ್ಮಿಕ ಸಂಸ್ಥೆಗಳೆಂದು ಘೋಷಿಸಿದ್ದು, ಅವುಗಳ ನಿರ್ವಹಣೆಗೆ ಸೀಮಿತ ಆರ್ಥಿಕ ನೆರವನ್ನೂ ಸರ್ಕಾರ ನೀಡುತ್ತಿದೆ. ಕೆಲವು ಗ್ರಾಮಗಳಲ್ಲಿ ಒಂದಕ್ಕಿಂತ ಹೆಚ್ಚು ಮುಜರಾಯಿ ದೇವಾಲಯಗಳಿದ್ದು, ಕೆಲವೆಡೆ ಜಾತ್ರೆಯೂ ನಡೆಯುತ್ತದೆ. ಹೀಗೆ ಪ್ರಾಕೃತಿಕವಾಗಿ, ಚಾರಿತ್ರಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿಶಿಷ್ಟ ಪರಂಪರೆಯನ್ನು ಹೊಂದಿರುವ ಈ ತಾಲೂಕಿನ ಮುಖ್ಯಸ್ಥಳಗಳಲ್ಲಿ ಕೆಲವನ್ನು ಇಲ್ಲಿ 'ಅ'ಕಾರಾದಿಯಲ್ಲಿ ಪರಿಚಯಿಸಲಾಗಿದೆ. ಆಯಾ ಸ್ಥಳದೊಂದಿಗೆ ಕಂಸದಲ್ಲಿ ನೀಡಿರುವ ಸಂಖ್ಯೆಯು, ೨೦೦೧ರ ಜನಗಣತಿಯನ್ವಯ ಇದ್ದ ಜನಸಂಖ್ಯೆಯನ್ನು ಸೂಚಿಸುತ್ತದೆ.

ಕಟ್ಟೆಮಳಲವಾಡಿ (೫,೪೫೧) : ಇದು, ಹುಣಸೂರಿನಿಂದ ಉತ್ತರಕ್ಕೆ ಎಂಟು ಕಿ.ಮೀ. ದೂರದಲ್ಲಿ ಹುಣಸೂರು–ಕೃಷ್ಣರಾಜನಗರ ಮಾರ್ಗ ಮಧ್ಯದಲ್ಲಿದೆ. ಹಿಂದೆ ಇಲ್ಲಿ ಮಣ್ಣಿನಕೋಟೆ ಕಟ್ಟಿಕೊಂಡು ಚಂಗಾಳ್ವರ ಸಾಮಂತರು ಅಧಿಕಾರ ನಡೆಸುತ್ತಿದ್ದರೆಂದು ತಿಳಿದುಬರುತ್ತದೆ. ಜನಪದ ಕಾವ್ಯ ಪಿರಿಯಾಪಟ್ಟಣ ಕಾಳಗದ ಪ್ರಕಾರ ಪುಟ್ಟರಾಜೇಅರಸು ಎಂಬವನು ಮೈಸೂರು ಅರಸನಿಗೆ ಪಿರಿಯಾಪಟ್ಟಣದ ಕಿರುಬಾಗಿಲನ್ನು ತೋರಿಸಿ ಪಿರಿಯಾಪಟ್ಟಣದ ಸೋಲಿಗೆ ಕಾರಣನಾದನೆಂದು ಹೇಳಲಾಗುತ್ತದೆ. ಚಂಗಾಳ್ವ ಪಿರಿಯರಾಜದೇವ ರುದ್ರಗಣನು ಪಿರಿಯಾಪಟ್ಟಣವನ್ನು ಆಳುತ್ತಿದ್ದಾಗ, ಪೆನುಗೊಂಡೆಯ ರಾಜ ಒಂದನೆಯ ವೆಂಕಟರಾಜನ ಮಂಡಲಾಧಿಕಾರಿಯಾಗಿ ಶ್ರೀರಂಗಪಟ್ಟಣದಲ್ಲಿದ್ದ ಎರಡನೆಯ ತಿರುಮಲರಾಯನು, ೧೬೦೭ರಲ್ಲಿ ಹುಣಸೂರು ತಾಲೂಕಿನ ಮಳಲವಾಡಿ ಸೀಮೆಯ ಮೂರು ಗ್ರಾಮಗಳನ್ನು ಪುಣ್ಯ ಪ್ರಾಪ್ತಿಗಾಗಿ ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನ ದೇವರ ಸೇವೆಗೆ ದಾನವಾಗಿ ಕೊಟ್ಟನೆಂದು ತಿಳಿದುಬರುತ್ತದೆ. ಇಲ್ಲಿಂದ ವರದಿಯಾಗಿರುವ ಎರಡು ಶಾಸನಗಳಲ್ಲಿ ವೆಂಕಟರಮಣ ಗುಡಿ ಮುಂದಿರುವ ೧೬೩೩ರ ಶಾಸನ, ಮಳಲವಾಡಿಯ ನಡುಕೇರಿ ತಿರುಮಲದೇವರ ನವರಂಗದ ೧೦ ಅಂಕಣದ ವಜ್ರಭಿತ್ತಿಗೋಡೆಯನ್ನು ಗವುಡಗೆರೆಯ ಕೋನೇರಿಯು ಮಾಡಿಸಿದ ಅಂಶವನ್ನು ದಾಖಲಿಸಿದರೆ, ಸ್ನಾನಘಟ್ಟದ ಬಳಿ ಬಿದ್ದಿರುವ ೧೮೨೯ರ ಶಾಸನ, ಚಿಕ್ಕರಾಜೇ ಅರಸರು ಲಕ್ಷ್ಮಣತೀರ್ಥ ನದಿಯ ಉತ್ತರದಂಡೆಯ ಮೇಲೆ ಸೀತಾರಾಮರನ್ನು ಪ್ರತಿಷ್ಠೆ ಮಾಡಿಸಿದ್ದನ್ನು ತಿಳಿಸುತ್ತದೆ. ಇಲ್ಲಿ ವೆಂಕಟರಮಣ ಹಾಗೂ ಸಿಡಿಯಮ್ಮನ ದೇವಸ್ಥಾನಗಳಿದ್ದು, ಪ್ರತೀವರ್ಷ

ನಡೆಯುವ ಸಿಡಿಯಮ್ಮನ ಜಾತ್ರೆಯಲ್ಲಿ 'ಸಿಡಿ' ಆಡುವುದುಂಟು. ಇತ್ತೀಚೆಗೆ ಅಲ್ಲಿದ್ದ ಮಣ್ಣಿನ ಕೋಟೆ ಗೋಡೆಯನ್ನು ಕೆಡವಿ ಸರ್ಕಾರಿ ಕಟ್ಟಡಗಳನ್ನು ನಿರ್ಮಿಸಲಾಗಿದೆ.

ಕಲ್ಲಹಳ್ಳಿ (೧,೮೯೪) : ಹುಣಸೂರು–ಪಿರಿಯಾಪಟ್ಟಣ ಮಾರ್ಗದಲ್ಲಿ ಹುಣಸೂರಿನಿಂದ ಪಶ್ಚಿಮಕ್ಕೆ ಎಂಟು ಕಿಮೀ ದೂರದಲ್ಲಿದೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸುರವರ ಊರಾದ ಇದನ್ನು ಅರಸು ಕಲ್ಲಹಳ್ಳಿ ಎಂದೂ ಕರೆಯುತ್ತಾರೆ. ಚಂಗಾಳ್ವರ ಕಾಲದಲ್ಲಿ ಇದು ಧಾತುಪುರವೆಂದು ಹೆಸರಾಗಿತ್ತು. ಮೂರನೆಯ ಮಂಗರಸನ ಕಾವ್ಯದಲ್ಲಿ ಇದು "......ಪ್ರಿಯದಿಂ ಪರಿಪಾಲಿಪನು ಜ್ವಲತೇಜಂಧಾತುಪುರಾಧೀಶಂ" ಎಂದೇ ಉಲ್ಲೇಖಗೊಂಡಿದೆ. ಕಲ್ಲಿಹಳ್ಳಿಯಿಂದ ವರದಿಯಾಗಿರುವ ನಾಲ್ಕು ಶಾಸನಗಳಲ್ಲಿ ೧೨೭೬ರ ಎರಡು ಕಲ್ಗಾಣ ಶಾಸನಗಳು, ಗಾಣವನ್ನು ದತ್ತಿ ನೀಡಿದ ಅಂಶ ತಿಳಿಸುತ್ತಿದ್ದು, ೧೨ನೆಯ ಶತಮಾನದ ಜಿನವಿಗ್ರಹ ಶಾಸನ ಆದಿನಾಥ ಮೂರ್ತಿಯ ಪ್ರತಿಷ್ಠಾಪನೆಯನ್ನು ದಾಖಲಿಸುತ್ತದೆ. ಈಗ ಕಲ್ಲಹಳ್ಳಿಯಲ್ಲಿ ಯಾವುದೇ ಉತ್ಸವ, ಹಬ್ಬಗಳಾದರೂ ಸಮೀಪದ ನಾಗಮಂಗಲ, ಹುಣಸೆಗಾಲ, ಕೊತ್ತೇಗಾಲ, ಯಮಗುಂಬ, ತಟ್ಟೆಕೆರೆ, ಆಡಿಗನಹಳ್ಳಿ ಮುಂತಾದ ಏಳು ಗ್ರಾಮದವರೂ ಭಾಗವಹಿಸಬೇಕೆಂಬ ಸಂಪ್ರದಾಯವಿದೆ. ಮಂಗರಸನ ಕಾಲಕ್ಕೆ ಕಲ್ಲಹಳ್ಳಿ, ಕೊತ್ತೆಗಾಲ, ಹಾಗೂ ಯಮಗುಂಬಗಳನ್ನೊಳಗೊಂಡಂತೆ ಒಂದು ದೊಡ್ಡ ಕೋಟೆಯಿದ್ದಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. ಕಲ್ಲಹಳ್ಳಿಯಲ್ಲಿ ಕವಿ ಮಂಗರಸನ ಕಾಲದಲ್ಲಿ ಆರಾಧಿಸುತ್ತಿದ್ದ ಬಸದಿಯೊಂದಿದ್ದು, ಅಲ್ಲಿರುವ ಜಿನೇಶ್ವರ ಮೂರ್ತಿಯನ್ನು ಚಂದ್ರನಾಥ ತೀರ್ಥಂಕರ ಮೂರ್ತಿಯೆಂದು ಕರೆಯುತ್ತಾರಾದರೂ, ಅದರ ಪೀಠದ ಮೇಲಿರುವ ಸುಮಾರು ೧೨ನೇ ಶತಮಾನದ ಶಾಸನದಲ್ಲಿ ಮಲ್ಲಿಗೌಡನ ಮುದ್ದಿಗೌಡನ ಮಗ ರಾಯಗೌಡ ಮಾಡಿಸಿದ ಆದಿ ಪರಮೇಶ್ವರ ಪ್ರತಿಮೆ...... ಎಂದಿರುವುದರಿಂದ ಅದು ಆದಿನಾಥ ಬಸದಿಯೆಂದು ತಿಳಿಯುತ್ತದೆ. ಮಂಗರಸನು ಇದನ್ನು ೧೦೮ ಅಂಕಣದ ದೊಡ್ಡ ಬಸದಿಯನ್ನಾಗಿ ಕಟ್ಟಿಸಿದ್ದನೆಂದು ಪ್ರತೀತಿ. ಪ್ರಸ್ತುತ ಬಸದಿಯ ಗರ್ಭಗುಡಿಯಷ್ಟೇ ಉಳಿದಿದ್ದು. ಜಿನ ವಿಗ್ರಹವನ್ನು ಪಾಣಿಪೀಠದಲ್ಲಿ ಪ್ರತಿಷ್ಠಾಪಿಸಲಾಗಿದೆ. ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜಅರಸು ಅವರ ಸಮಾಧಿಯೂ ಇಲ್ಲಿದೆ. ಪ್ರಗತಿಶೀಲ ಸಾಹಿತಿ ಚದುರಂಗ ಈ ಗ್ರಾಮದವರು.

ಗದ್ದಿಗೆ (೭೬೦) : ಕುಟುವಾಡಿ ಕಂದಾಯಗ್ರಾಮದ ವ್ಯಾಪ್ತಿಯಲ್ಲಿ ಲಕ್ಷ್ಮಣತೀರ್ಥ ನದಿಗೆ ಅನತಿ ದೂರದಲ್ಲಿ ಪ್ರಶಾಂತವಾದ ಸ್ಥಳದಲ್ಲಿ ಹುಣಸೂರಿನಿಂದ ಆಗ್ನೇಯಕ್ಕೆ ೨೪ ಕಿಮೀ ಹಾಗೂ ಎಚ್.ಡಿ. ಕೋಟೆಯಿಂದ ೧೫ ಕಿಮೀ ಅಂತರದಲ್ಲಿದೆ. ವೀರಶೈವ ಮತದ ಕೆಂಡಗಣ್ಣಸ್ವಾಮಿಗಳು ಸು. ೩೦೦ ವರ್ಷಗಳ ಹಿಂದೆ ಮಹದೇಶ್ವರಸ್ವಾಮಿ ದೇವಾಲಯವನ್ನು ಇಲ್ಲಿ ಸ್ಥಾಪಿಸಿದರೆಂದು ತಿಳಿದು ಬರುತ್ತದೆ. ಪ್ರತೀ ವರ್ಷ ಮಹಾಶಿವರಾತ್ರಿಯಂದು ಇಲ್ಲಿ ನಡೆಯುವ ಜಾತ್ರೆಗೆ ಸಾವಿರಾರು ಮಂದಿ ಸೇರುತ್ತಾರೆ. ಇತ್ತೀಚೆಗೆ ಮಹಾಲಿಂಗ ಮತ್ತು ನಂದಿ ವಿಗ್ರಹಗಳನ್ನು ಪ್ರತಿಷ್ಠಾಪಿಸಿ ಸುತ್ತಲೂ ಹೊಸ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಈ ಕ್ಷೇತ್ರದ ಭಕ್ತಾದಿಗಳಲ್ಲಿ ಮೈಸೂರು ಅರಸರೂ ಒಬ್ಬರಾಗಿದ್ದರು.

ಗಾವಡಗೆರೆ (೩,೨೧೫) : ಹುಣಸೂರು-ಕೃಷ್ಣರಾಜನಗರ ಮಾರ್ಗ ಮಧ್ಯದಲ್ಲಿ ಹುಣಸೂರಿನಿಂದ ಉತ್ತರಕ್ಕೆ ೧೩ ಕಿಮೀ ದೂರದಲ್ಲಿರುವ ಹೋಬಳಿ ಕೇಂದ್ರ. ಇಲ್ಲಿ ಗುರುಲಿಂಗಜಂಗಮ ಮಠವಿದೆ. ಈ ಮಠವನ್ನು ಶ್ರೀ ನಂಜುಂಡ ಶಿವಯೋಗಿಗಳು ಸ್ಥಾಪಿಸಿದರೆಂದು ಪ್ರತೀತಿಯಿದ್ದು, ಶಾಲಾ-ಕಾಲೇಜುಗಳನ್ನೂ ಅದು ನಡೆಸುತ್ತಿದೆ. ಗಾವಡಗೆರೆಯಲ್ಲಿ ಮರಾಠ ಸಮುದಾಯದವರು ಅಧಿಕ ಸಂಖ್ಯೆಯಲ್ಲಿದ್ದಾರೆ. ಷಹಜಿ-ಶಿವಾಜಿ ಕಾಲದಲ್ಲಿ ಇತ್ತ ವಲಸೆ ಬಂದ ಅವರು ತಾಲೂಕಿನ ಅಷ್ಟಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ಈ ಹಿಂದೆ ಗಾವಡಗೆರೆಯ ಮರಾಠ ಕುಟುಂಬದವರು ಜಾಗತಿಕ ಮಹಾಯುದ್ಧದಲ್ಲಿ ಭಾಗವಹಿಸಿ ಮರಳಿ ಬಂದವರ ಸ್ಮರಣಾರ್ಥವಾಗಿ ಗ್ರಾಮದೇವತೆ ಪಟ್ಟಳದಮ್ಮನ ಗುಡಿಯನ್ನು ನಿರ್ಮಿಸಿದ್ದಾರೆ. ನವರಾತ್ರಿ, ದೀಪಾವಳಿ, ನಾಗರಪಂಚಮಿ ಮುಂತಾದ ಕೆಲವು ಹಬ್ಬಾಚರಣೆಗಳಲ್ಲಿ ಹಿಂದಿನಿಂದ ನಡೆದು ಬಂದಿರುವ ಅವರ ಸಂಸ್ಕೃತಿ ಕಾಣುತ್ತದೆ.

ಗೊಮ್ಮಟಗಿರಿ : ಬಿಳಿಕೆರೆ ಹೋಬಳಿ ವ್ಯಾಪ್ತಿಯಲ್ಲಿರುವ ಗೊಮ್ಮಟಗಿರಿ, ಜೈನರ ಪವಿತ್ರಕ್ಷೇತ್ರ ಹಾಗೂ ಪ್ರವಾಸಿ ತಾಣ. ಮೈಸೂರು-ಬಿಳಿಕೆರೆ ಮಾರ್ಗದಲ್ಲಿ, ಮನುಗನಹಳ್ಳಿಯಿಂದ ಉತ್ತರಕ್ಕೆ ಏಳು ಕಿಮೀ ದೂರದಲ್ಲಿದೆ. ಇಲ್ಲಿ ಸು. ೧೦೦ ಅಡಿ ಎತ್ತರದ ಬೆಟ್ಟದ ಮೇಲೆ ಸುಮಾರು ೧೬ ಅಡಿ ಎತ್ತರದ ಬೃಹತ್ ಏಕಶಿಲಾ ಗೊಮ್ಮಟೇಶ್ವರನ ವಿಗ್ರಹವನ್ನು ಕೆತ್ತಲಾಗಿದೆ. ದೂರದಿಂದ ನೋಡಿದರೆ ಬೆಟ್ಟವು ದೊಡ್ಡರಥದಂತೆ ಮನೋಹರವಾಗಿ ಕಾಣುತ್ತದೆ. ಗುಂಗುರು ಕೂದಲಿನಿಂದ ಕೂಡಿರುವ ಗೋಮ್ಮಟೇಶ್ವರನ ಪ್ರತಿಮೆ ಗಂಭೀರ ಮುಖಮುದ್ರೆಯಲ್ಲಿದೆ. ಪುಷ್ಕರಿಣಿ, ತೀರ್ಥಂಕರರ ಪಾದ ಹಾಗೂ ಮಹಾವೀರರು ಮೋಕ್ಷ ಪಡೆದ ಐತಿಹಾಸಿಕ ಸ್ಮಾರಕಗಳು ಇಲ್ಲಿವೆ. ಗಂಗರಸ ನಾಲ್ಕನೆಯ ರಾಚಮಲ್ಲನ ಮಂತ್ರಿಯಾಗಿದ್ದ ಚಾವುಂಡರಾಯನ ವಂಶಸ್ಥರೂ ಈ ಪ್ರಾಂತದ ಪ್ರಭುಗಳೂ ಆಗಿದ್ದ ಚಂಗಾಳ್ವ ಮನೆತನದ ಅರಸರು ಇದನ್ನು ಪ್ರತಿಷ್ಠಾಪಿಸಿದರೆಂಬ ಅಭಿಪ್ರಾಯವೂ ಇದೆ. ತಾಲೂಕಿನ ಹೊನ್ನೇನಹಳ್ಳಿ, ರತ್ನಪುರಿ, ರಾಮಪಟ್ಟಣ ಮುಂತಾದ ಕಡೆ ಜೈನ ಬಸದಿಗಳಿರುವುದು ಶಾಸನಗಳ ಮೂಲಕ ತಿಳಿದುಬರುತ್ತದೆಯಾದರೂ ಈಗ ಶಿಥಿಲಾವಸ್ಥೆಯಲ್ಲಿವೆ.

ಚಿಲ್ಕುಂದ (೨,೯೫೦) : ಇದು ಹುಣಸೂರು-ಪಿರಿಯಾಪಟ್ಟಣ ಹೆದ್ದಾರಿಯಲ್ಲಿ ಹುಣಸೂರಿನಿಂದ ಪಶ್ಚಿಮಕ್ಕೆ ೧೭ ಕಿಮೀ ದೂರದಲ್ಲಿದೆ. ಹನಗೋಡು ಹೋಬಳಿ ವ್ಯಾಪ್ತಿಯಲ್ಲಿರುವ ಚಿಲ್ಕುಂದ ಗ್ರಾಮ ಐತಿಹಾಸಿಕ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಪಿರಿಯಪಟ್ಟಣದ ವೀರರಾಜ ಹಾಗೂ ಮೈಸೂರು ದಳವಾಯಿಗಳ ನಡುವೆ ಮೊದಲ ಯುದ್ಧ ನಡೆದ ಸ್ಥಳ ಇದಾಗಿದ್ದು, ಪಿರಿಯಾಪಟ್ಟಣ ಕಾಳಗದ ಪ್ರಕಾರ, ಮೈಸೂರು ಸೈನ್ಯ ಸಣ್ಣನಳ್ಳಿ, ತಿಮ್ಮಲಾಪುರ, ಯಮಗಂಬ, ಕೊತ್ತೇಗಾಲಗಳನ್ನು ಸೂರೆಮಾಡಿ ಚಿಲ್ಕುಂದವನ್ನು ಸಮೀಪಿಸಿತು. ಆಗ ಮೈಸೂರು ಸೈನ್ಯವನ್ನು ನೋಡಿದ ಚಿಲ್ಕುಂದದ ವೀರನಾರಿ ಓಣಿಯಮ್ಮ, ಅವರನ್ನು ಹೊಡೆದೋಡಿಸಿದಳೆಂದು ಹೇಳಲಾಗುತ್ತದೆ. ಈಗಲೂ ಚಿಲ್ಕುಂದದಲ್ಲಿ ಓಣಿಯಮ್ಮನ (ವಾಣಿಯಮ್ಮ) ದೇವಸ್ಥಾನ ಇದೆ. ಆನಂತರ ಬ್ರಿಟಿಷರು

ಕೊಡಗಿನ ಮೂಲಕ ದಂಡು ತೆಗೆದುಕೊಂಡು ಬಂದಾಗ, ಶತ್ರುಗಳಿಗೆ ನೀರೂ ಸಿಗದಂತೆ ಮಾಡಲು, ಟಿಪ್ಪುಸುಲ್ತಾನ ಚಿಲ್ಕುಂದದ ತಾವರೆಕೆರೆಯ ಏರಿಯನ್ನು ಒಡೆಸಿದನೆಂದು ಪ್ರತೀತಿ ಇದೆ.

ತೊಂಡಾಳು (೧೦೧೫) : ಹುಣಸೂರಿನಿಂದ ೧೦ ಕಿ.ಮೀ. ದೂರದಲ್ಲಿರುವ ಇಲ್ಲಿಂದ ಈವರೆಗೆ ವರದಿಯಾಗಿರುವ ನಾಲ್ಕು ಶಾಸನಗಳಲ್ಲಿ ಎರಡು ಹೊಯ್ಸಳ ಒಂದನೇ ನರಸಿಂಹನ ಆಳ್ವಿಕೆಗೆ ಸೇರಿದ್ದು, ೧೧೬೭ರ ಶಾಸನ ತೊಂಡೆಯಹಾಳದ ಹರದಗೌಡನು ತನ್ನ ಬಂಧುಗಳು ನಿರ್ಮಿಸಿದ ದೇವಾಲಯ ಹಾಗೂ ಕೆರೆಗಳ ನಿರ್ವಹಣೆಗೆಂದು ನಾಲ್ಕು ಖಂಡುಗ ಭೂಮಿಯನ್ನೂ ಹಾಗೂ ಬೆದ್ದಲೆ ಭೂಮಿಯ ಉತ್ಪನ್ನದ ಮೂರನೆಯ ಒಂದು ಭಾಗವನ್ನು ದತ್ತಿ ಬಿಟ್ಟದ್ದನ್ನು ದಾಖಲಿಸಿದರೆ, ಗುಡಿಯ ಅರ್ಚಕ ತ್ರಿಭುವನಶಕ್ತಿ ಪಂಡಿತರಿಗೆ ದತ್ತಿ ಬಿಟ್ಟಿದ್ದನ್ನು ಇನ್ನೊಂದು ಶಾಸನ ದಾಖಲಿಸುತ್ತದೆ. ಉಳಿದ ಎರಡು ಶಾಸನಗಳು ೧೭ನೇ ಶತಮಾನಕ್ಕೆ ಸೇರಿದ್ದು ಗುಡಿಗೆ ಭಕ್ತರು ಕಂಬ ಮಾಡಿಸಿದ್ದನ್ನು ದಾಖಲಿಸುತ್ತವೆ. ಈ ಶಾಸನಗಳಿರುವ ಸೋಮೇಶ್ವರ ಗುಡಿ ಹೊಯ್ಸಳ ರಚನೆಯಾಗಿದ್ದು, ೧೭ನೇ ಶತಮಾನದಲ್ಲಿ ದುರಸ್ತಿಗೊಂಡಿರುವುದು ಇದರಿಂದ ಖಾತರಿಯಾಗುತ್ತದೆ.

ಧರ್ಮಾಪುರ (೨,೭೪೩) : ಹುಣಸೂರಿನಿಂದ ೧೨ ಕಿ.ಮೀ. ದೂರದಲ್ಲಿರುವ ಇಲ್ಲಿಂದ ಈವರೆಗೆ ವರದಿಯಾಗಿರುವ ಮೂರು ಶಾಸನಗಳಲ್ಲಿ ಎರಡು ಚನ್ನಕೇಶವನ ಗುಡಿ ಬಳಿಯಿವೆ. ಒಂದನೆಯ ನರಸಿಂಹನ ೧೧೬೨ರ ಶಾಸನ, ತೊಗರವಾಡಿ ಹಾಗೂ ಬೂವನಹಳ್ಳಿಗಳನ್ನು ಅಗ್ರಹಾರವನ್ನಾಗಿಸಿ, ಧರ್ಮಾಪುರ ಎಂಬ ಅಭಿಧಾನದೊಂದಿಗೆ ಅಲ್ಲಿಯ ಕೇಶವದೇವರಿಗೆ ದತ್ತಿಬಿಟ್ಟಿದ್ದನ್ನು ದಾಖಲಿಸಿದ್ದು, ನರಸಿಂಹನನ್ನು ಅತಿಯಾಗಿ ಇಲ್ಲಿ ವರ್ಣಿಸಲಾಗಿದೆ. ಅಲ್ಲೇ ಇರುವ ೧೧೧೫ರ ಶಾಸನ, ಧರ್ಮಪುರದ ಕೇತಗೌಡನು ಕಲ್ಗಾಣವನ್ನು ದತ್ತಿಬಿಟ್ಟಿದ್ದನ್ನು ದಾಖಲಿಸಿದೆ. ಇಲ್ಲಿಯ ಈಶ್ವರಗುಡಿ ಬಳಿಯಿರುವ ೧೫ನೇ ಶತಮಾನದ ಶಾಸನ, ಬೂವಣ್ಣನ ಕಂಬದ ಸೇವೆಯನ್ನು ದಾಖಲಿಸುತ್ತದೆ. ಇಲ್ಲಿಯ ಚನ್ನಕೇಶವ ದೇವಾಲಯ ಹೊಯ್ಸಳ ರಚನೆಯಾಗಿದ್ದು ಆಕರ್ಷಕವಾಗಿದೆ.

ಮರದೂರು (೧,೭೯೬) : ಹುಣಸೂರಿನಿಂದ ಪೂರ್ವಕ್ಕೆ ಏಳು ಕಿಮೀ ದೂರದಲ್ಲಿರುವ ಮರದೂರು ಹೊಯ್ಸಳಶೈಲಿಯ ಮಲ್ಲೇಶ್ವರ ಹಾಗೂ ವೇಣುಗೋಪಾಲಸ್ವಾಮಿ ದೇವಸ್ಥಾನಕ್ಕೆ ಪ್ರಸಿದ್ಧವಾಗಿದೆ. ವೇಣುಗೋಪಾಲನ ದೇವಸ್ಥಾನದಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿವೆ. ದೇವರ ವಿಗ್ರಹವಿರುವ ಪಾಣಿಪೀಠ ಹೊಯ್ಸಳ ಶೈಲಿಯಲ್ಲಿದೆ. ಈ ದೇವಾಲಯಕ್ಕೆ ವಿಜಯನಗರದ ಅರಸರ ಕಾಲದಲ್ಲಿ ಕಟ್ಟಿದ ಮುಖಮಂಟಪವಿದೆ. ಇಲ್ಲಿರುವ ಒಂದು ಶಾಸನದ ಪ್ರಕಾರ ೧೫ನೆಯ ಶತಮಾನದಲ್ಲಿ ಪಟ್ಟಣಸ್ವಾಮಿ ನಾಗಿಶೆಟ್ಟಿಯ ಮಗ ಗೋಪಿಶೆಟ್ಟಿಯು, ಗೋಪಿನಾಥ ದೇವಾಲಯಕ್ಕೆ ಗಂಧಗೋಟಿಯನ್ನು ಕಾಣಿಕೆ ನೀಡಿದ ವಿಷಯ ದಾಖಲಾಗಿದೆ. ಇಲ್ಲಿ ಹೊಯ್ಸಳ ಶೈಲಿಯ ಲಕ್ಷಣಗಳುಳ್ಳ ಮಲ್ಲೇಶ್ವರ ಹಾಗೂ ಇತರೆ ದೇವಾಲಯಗಳಿದ್ದು, ಹೊಯ್ಸಳ ವಿಷ್ಣುವರ್ಧನನ ಕ್ರಿ.ಶ. ೧೧೦೬ರ ವೀರಗಲ್ಲು ಶಾಸನ ತುರುಕಾಳಗದಲ್ಲಿ ಕತ್ತಿಣೆಯ ಕಾರನಾಥನ ಸಲುವಾಗಿ

ವೀರಗಲ್ಲು ನಿಲ್ಲಿಸಿ ಭೂದಾನ ನೀಡಿದ್ದನ್ನು ದಾಖಲಿಸುತ್ತದೆ. ಇದೇ ಗುಡಿ ಬಳಿಯಿರುವ ಸುಮಾರು ೧೬ನೇ ಶತಮಾನದ ಶಾಸನ ಕಲ್ಗಾಣ ನೀಡಿದ್ದನ್ನು ದಾಖಲಿಸಿದೆ.

ಯಮಗುಂಬ (೧,೬೪೯) : ಇದು ಹುಣಸೂರಿನಿಂದ ೧೩ ಕಿಮೀ ಹಾಗೂ ಕಲ್ಲಹಳ್ಳಿಯಿಂದ ಆರು ಕಿಮೀ ದೂರದಲ್ಲಿದೆ. ಈ ಗ್ರಾಮ ಚಂಗಾಳ್ವ ಮಂಗರಸನ ಕಾಲದಲ್ಲಿ ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ಇಲ್ಲಿರುವ ಪಾರ್ಶ್ವನಾಥ ಬಸದಿ ಪ್ರಾಚ್ಯವಸ್ತು ಇಲಾಖೆಯಿಂದ ಸಂರಕ್ಷಿತವಾಗಿದ್ದು, ಇಂದಿಗೂ ಇದು ತಾಲೂಕಿನ ಪ್ರಸಿದ್ಧ ಜೈನ ದೇಗುಲವಾಗಿದೆ. ಬಸದಿಯ ಗರ್ಭಗುಡಿಯೊಳಗೆ ಎರಡೂವರೆ ಅಡಿ ಎತ್ತರದ ಪೀಠದ ಮೇಲೆ ನಾಲ್ಕು ಅಡಿ ಎತ್ತರದ ಪಾರ್ಶ್ವನಾಥನ ಶಿಲಾ ಪ್ರತಿಮೆ ಇದ್ದು, ಬ್ರಹ್ಮದೇವರ ಮೂರ್ತಿ ಭಿನ್ನವಾಗಿದೆ. ಅನತಿದೂರದಲ್ಲಿ ಮಂಗರಸನ ಕಾಲದಲ್ಲಿ ಕಟ್ಟಿಸಿದ್ದೆಂದು ಹೇಳಲಾಗುವ ಕೆರೆಯಿದೆ.

ರತ್ನಪುರಿ (೨,೪೪೯) : ಈ ಗ್ರಾಮ ಹುಣಸೂರಿನ ಆಗ್ನೇಯಕ್ಕೆ ೧೨ ಕಿಮೀ ದೂರದಲ್ಲಿದೆ. ಇಲ್ಲಿಂದ ಈವರೆಗೆ ಐದು ಶಾಸನಗಳು (೧೨-೧೫ನೇ ಶತಮಾನ) ವರದಿಯಾಗಿವೆ. ಅವುಗಳಲ್ಲಿ ಒಂದು ಜೈನತೀರ್ಥಂಕರ ಪೀಠ ಶಾಸನ(ಸು. ೧೨ನೇ)ವಾದರೆ ಉಳಿದ ಮೂರು ೧೫ನೇ ಶತಮಾನಕ್ಕೆ ಸೇರಿದ್ದು, ೧೪೧೭ರ ಶಾಸನ ನೇಮವನ್ನು ಹೇಳಿದರೆ ೧೪೫೦ರ ಶಾಸನ, ಲಕ್ಷ್ಮೀನಾರಾಯಣದೇವರಿಗೆ ದತ್ತಿಬಿಟ್ಟಿದ್ದನ್ನು ತಿಳಿಸುತ್ತದೆ. ಇನ್ನೊಂದು ಶಾಸನ ಕಂಬದ ತಿರುಮಲದೇವರ ಗುಡಿಯನ್ನು ಮಳವಾಡಿಯ ಮರಿಸೆಟ್ಟರು ಜೀರ್ಣೋದ್ಧಾರ ಮಾಡಿಸಿದ್ದನ್ನು ದಾಖಲಿಸಿದೆ. ಮಿಗಿಲಾಗಿ ಇಲ್ಲಿ ಮಸೀದಿ ಹಾಗೂ ಜಮಾಲ್‌ಬೀಬಿ ಗೋರಿ ಇರುವುದರಿಂದ ಈ ಊರನ್ನು ದರ್ಗಾ ಎಂತಲೂ ಕರೆಯುತ್ತಾರೆ. ರತ್ನಶೇಖರನೆಂಬ ರಾಜ ಭವ್ಯವಾದ ಅರಮನೆ ನಿರ್ಮಿಸಿ, ನಾಲ್ಕು ದಿಕ್ಕುಗಳಿಗೂ ತನ್ನ ಸಾಮ್ರಾಜ್ಯ ವಿಸ್ತರಿಸಿದನೆಂದೂ ರತ್ನಪುರ (ರಿ)ವನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದ ಅವನಿಗೆ ವಜ್ರಮುಕುಟನೆಂಬ ಮಗನಿದ್ದನೆಂದೂ ಹೇಳಲಾಗುತ್ತದೆ. ಪಿರಿಯಾಪಟ್ಟಣ ಕಾಳಗದಲ್ಲಿ ರತ್ನಪುರವನ್ನು ರತ್ನರಾಜೇಅರಸು ಆಳುತ್ತಿದ್ದನೆಂದೂ, ಇವನು ಮೈಸೂರು ದಳವಾಯಿಗೆ ಸಹಾಯ ಮಾಡಿ ಪಿರಿಯಾಪಟ್ಟಣದ ವೀರರಾಜನ ಸೋಲಿಗೆ ಕಾರಣನಾದನೆಂದೂ ಹೇಳಲಾಗಿದೆ. ಅರಮನೆಯ ರಕ್ಷಣೆಗೆಂದು ಕೋಟೆಕಟ್ಟಿಸಿ ಅದರ ಸುತ್ತ ಕಂದಕ ನಿರ್ಮಿಸಿ ರಾತ್ರಿ ವೇಳೆ ಶತ್ರುಗಳ ಧಾಳಿ ವಿಫಲಗೊಳಿಸಲು ಅವುಗಳಿಗೆ ನೀರು ತುಂಬಿಸುವ ವ್ಯವಸ್ಥೆ ಮಾಡಿಸಿದ್ದು ಇವನೇ ಎಂದೂ ಹೇಳಲಾಗುತ್ತದೆ. ಇಂದು ಕಂದಕಗಳಿವೆಯಾದರೂ ಕೋಟೆ ಉಳಿದಿಲ್ಲ. ಈ ರಾಜನಿಗೆ ಜಾನಕಿದೇವಿ ಎಂಬ ಮಗಳಿದ್ದು ಅವಳು ವಿವಾಹಪೂರ್ವದಲ್ಲೇ ತಾಯಿಯಾದುದರಿಂದ ಅವಳನ್ನು ಶಿಕ್ಷಿಸಲು ರಾಜಾಜ್ಞೆಯಾಯಿತು. ಆಗ ಜಾನಕಿದೇವಿ ಹಾಗೂ ಮಗು ಜೀವಂತ ಭೂಮಿಯೊಳಗೆ ಸೇರಿಕೊಂಡರೆಂದೂ ಅದನ್ನು ಕಂಡು ಓಡಿಬಂದ ಮುಸ್ಲಿಮ್ ಫಕೀರನೊಬ್ಬನಿಗೆ ಜಾನಕಿದೇವಿಯ ಸೀರೆ ಸೆರಗು ಮಾತ್ರ ಸಿಕ್ಕಿತು ಎಂದೂ ಹೇಳಲಾಗುತ್ತದೆ. ಜಾನಕೀದೇವಿ ಐಕ್ಯವಾದ ಸ್ಥಳದಲ್ಲಿ ಸಮಾಧಿ ನಿರ್ಮಿಸಿ ಜಾನಕಿದೇವಿಯ ಸೀರೆ ಸೆರಗನ್ನು ಅದರ ಮೇಲೆ ಅವನೇ ಹೊದಿಸಿದನಂತೆ. ಜಾನಕಿ ದೇವಿಯ ಪವಾಡವನ್ನು ಕಣ್ಣಾರೆಕಂಡ

ಫಕೀರ ಈ ಸಮಾಧಿಗೆ 'ಜಮಾಲಮ್ಮಗೋಧ' ಎಂದು ಹೆಸರಿಟ್ಟು ಬಹಳ ಭಕ್ತಿಭಾವದಿಂದ ಪೂಜಿಸತೊಡಗಿದನೆಂದು ಪ್ರತೀತಿ. ಈ ಸಮಾಧಿಗೆ ಹಿಂದೂಗಳು ಹಾಗೂ ಮುಸಲ್ಮಾನರು ಸೇರಿ ಪೂಜಿಸುತ್ತಾ ಬಂದಿದ್ದಾರೆ. ಮುಂದೆ ಇಲ್ಲಿಗೆ ಬಂದ ಮಲ್ಲಿಕಾಫರ್ ಈ ಸಮಾಧಿಗೆ 'ಜಮಾಲ್‌ಬೇಬಿ' ಎಂದು ನಾಮಕರಣ ಮಾಡಿದನೆಂದು ಹೇಳಲಾಗುತ್ತದೆ. ಪ್ರತಿವರ್ಷ, ಫೆಬ್ರವರಿ ತಿಂಗಳ ಮೊದಲ ಅಥವಾ ಎರಡನೆಯ ವಾರದಲ್ಲಿ ಅದ್ದೂರಿಯ ಉರುಸು ನಡೆಯುತ್ತದೆ. ಜಾತ್ರೆ ದಿನಾಂಕವನ್ನು ಹಿಂದೂ-ಮುಸ್ಲಿಮರು ಸೇರಿ ಚರ್ಚಿಸಿ ಶನಿವಾರ ಆಂಜನೇಯ ಸ್ವಾಮಿ ಜಾತ್ರೆ ಎಂದೂ ಭಾನುವಾರ ಜಮಾಲ್‌ಬೇಬಿ ಜಾತ್ರೆ ಎಂದೂ, ತೀರ್ಮಾನಿಸುತ್ತಾರೆ. ಜಾತ್ರೆಯ (ಉರುಸ್) ದಿನ ಮುಸ್ಲಿಮ್ ಫಕೀರರು ಪವಾಡಗಳನ್ನು ಮೆರೆಯುತ್ತಾರೆ.

ರಾಮಪಟ್ಟಣ (೮೩೯) : ಹುಣಸೂರಿನಿಂದ ೧೦ ಕಿ.ಮೀ. ದೂರದಲ್ಲಿದ್ದು, ಅಲ್ಲಿರುವ ಎರಡು ಶಾಸನಗಳಿಂದ ಹಿಂದೆ ಹೊಯ್ಸಳರ ಕಾಲದಲ್ಲಿ ಅದೊಂದು ಪ್ರಮುಖ ಕೇಂದ್ರವಾಗಿದ್ದ ಅಂಶ ವೇದ್ಯವಾಗುತ್ತದೆ. ಹೊಳೆ ಬಳಿಯ ಜೈನಬಸದಿ ಪಾಳು ನಿವೇಶನದಲ್ಲಿರುವ ೧೧೨೪ರ ಶಾಸನ, ಚಟ್ಟೆಯ ಹಾಗೂ ಚಾಮರಾಜ ದಂಡನಾಯಕ ಸೋದರರು, ಅತ್ತಿಮಬ್ಬೆಗೆ ಸರಿಸಾಟಿಯಾದ ತಮ್ಮವ್ವೆ ಕಮಲದೇವಿಗೆ ಪರೋಕ್ಷ ವಿನಯವಾಗಿ. ತೊರೆನಾಡ ಹೆಜ್ಜಾಜಿ (ಹಿರಿಜಾಜಿ)ಯಲ್ಲಿ ಎರಡು ಬಸದಿಗಳನ್ನು ನಿರ್ಮಿಸಿ ಭೂದಾನ ನೀಡಿದ್ದನ್ನು ದಾಖಲಿಸಿದರೆ, ರಾಮೇಶ್ವರ ಗುಡಿಯ ಕಲ್ಲುಗಾಣ ಶಾಸನ (೧೩೪೨). ಸೋಮನಾಥ ದೇವರ ನಂದಾದೀಪಕ್ಕೆಂದು ತೈಲಕ್ಕೆ ನಡೆವ ಗಾಣವನ್ನು ದತ್ತಿಬಿಟ್ಟಿದ್ದನ್ನು ದಾಖಲಿಸುತ್ತದೆ. ಜೈನಬಸದಿಯಿಂದು ಕಣ್ಮರೆಯಾಗಿದ್ದರೆ. ರಾಮೇಶ್ವರ ಗುಡಿಯು ಶಿಥಿಲಾವಸ್ಥೆಯಲ್ಲಿದೆ.

ಹರವೆ (೧೮೩೧) : ಹುಣಸೂರಿನಿಂದ ೨೦ ಕಿ.ಮೀ. ದೂರದಲ್ಲಿರುವ ಇದರ ಪ್ರಾಚೀನತೆಯನ್ನು ಸುಮಾರು ಎಂಟನೆಯ ಶತಮಾನಕ್ಕೆ ಗುರುತಿಸಬಹುದಾಗಿದೆ. ಇಲ್ಲಿಯ ಈಶ್ವರಗುಡಿ ಮುಂದಿರುವ ಎರಡು ವೀರಗಲ್ಲು ಶಾಸನಗಳಿಂದ ಅಲ್ಲಿ ಹಿಂದೆ ನಡೆದಿರುವ ಕದನದಲ್ಲಿ ಮಡಿದ ಯೋಧರಿಗೆ ಸ್ಮಾರಕ ನಿಲ್ಲಿಸಿದ ಅಂಶ ವೇದ್ಯವಾಗುತ್ತದೆ. ಅಲ್ಲದೆ ಅಲ್ಲಿದ್ದ ಬಸದಿಯೊಂದರ ಬಗೆಗೂ ಸುಳಿವು ಲಭಿಸುತ್ತದೆ. ಊರ ಕೆರೆಬಳಿಯ ಪಾಳು ಈಶ್ವರ ಗುಡಿ ಮುಂದಿರುವ ಸು. ೮ನೆಯ ಶತಮಾನದ ಶಾಸನ, ಶಿವಮಾರನ ಆಳ್ವಿಕೆಯನ್ನು ಸೂಚಿಸುತ್ತಿದ್ದು ವಿವರ ಹಾಳಾಗಿದೆ.

ಹೊನ್ನೇನಹಳ್ಳಿ (೧೯೭) : ಹುಣಸೂರಿನಿಂದ ೧೮ ಕಿ.ಮೀ. ದೂರದಲ್ಲಿರುವ ಇದು ೧೩೦೦ರ ಹೊಯ್ಸಳ ಶಾಸನದಲ್ಲಿ ಹೊನೆಯನಹಳ್ಳಿ ಎಂದೇ ಉಲ್ಲೇಖಿತಗೊಂಡಿದ್ದು, ಪದ್ಮನಂದಿ ಭಟ್ಟಾರಕರು ಇಲ್ಲಿಯ ಬಸದಿಯ ಗಂಧಗುಡಿಯನ್ನು ೧೫ ಗದ್ಯಾಣ ನೀಡಿ ಮಾಡಿಸಿದ ಅಂಶ ದಾಖಲಾಗಿದೆ. ಶಾಸನವಿರುವ ಬಸದಿಯೇ ಶಾಸನೋಕ್ತ ಬಸದಿಯಾಗಿದ್ದು, ಶಿಥಿಲಾವಸ್ಥೆಯಲ್ಲಿದೆ.

* * * *